<u>ದಿಃ **27-08-2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>**ಜಿ.ಪಿ.ಎ ಹೊಲ್ಡರ್ ರವರ ಮುಖ್ಯ ವಿಚಾರಣೆ :**</u> ಶ್ರೀ.ಬಿ.ಎಸ್. ನ್ಯಾಯವಾದಿಗಳಿಂದಃ

ನಾನು ನನ್ನ ಮುಖ್ಯ ವಿಚಾರಣೆಗೆ ಅನುಗುಣವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ವಾದಿಯು ಬರೆದುಕೊಟ್ಟ ಸಾಮಾನ್ಯ ಮೊಕ್ತಿಯಾರ್ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.1 ಎಂದು, ಅಸಲು ದಾವೆ ಸಂಖ್ಯೆಃ65/2002 ರ ತೀರ್ಪು ಮತ್ತು ಡಿಕ್ರಿ ಯ ದೃಡೀಕೃತ ದಾಖಲೆಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ. 2 ಮತ್ತು 3 ಎಂದು, ದಾವ ಸ್ವತ್ತಿಗೆ ಸಂಬಂದಿಸಿದ ಕರ ಆಕರಣೆಯ ರಿಜಿಸ್ಟರ್ ನ 2 ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.4 ಮತ್ತು 5 ಎಂದು, 1985-86 ನೇ ಸಾಲಿನ ಖಾತ ಎಕ್ಸಾಟ್ರಾಕ್ಟ ನ ದಾಖಲೆಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.6 ಎಂದು, 1 ಋಣ ಭಾರ ರಾಹಿತ್ಯದ ದೃಡೀಕೃತ ದಾಖಲೆಯನ್ನು ಹಾಜರುಪಡಿಸುತ್ತಿದ್ದು , ಅದನ್ನು ನಿ.ಪಿ.7 ಎಂದು, ದಾವ ಸ್ವತ್ತಿಗೆ ಸಂಬಂದಿಸಿದ 3 ಹಾಳೆಯಲ್ಲಿ ಕಂದಾಯ ಪಾವತಿಯ ರಶೀದಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.8 ರಿಂದ 10 ಎಂದು, ವಾದಿಯು ದಾವ ಸ್ವತ್ತಿನ ಸಂಬಂದ ಜಗಳೂರು ಪೋಲಿಸ್ ಠಾಣೆ ಇವರಿಗೆ ನೀಡಿದ ದೂರಿನ 1 ದಾಖಲೆಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ. 11 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು